# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ಸದಸ್ಯರ ಹೆಸರು | : | ಶ್ರೀ ಪ್ರತಾಪ್ ಸಿಂಹ ನಾಯಕ್.ಕೆ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **1051** |
| ಉತ್ತರಿಸಬೇಕಾದ ದಿನಾಂಕ | : | 28.12.2022 |
| ಉತ್ತರಿಸಬೇಕಾದ ಸಚಿವರು | : | ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಪ್ರಸ್ತುತ ಗುರುತಿಸಿರುವ ಒಟ್ಟು ನಿವೇಶನ ರಹಿತರ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು) | 2018 ರ ಸಮೀಕ್ಷೆಯನ್ವಯ ಗ್ರಾಮೀಣ ಪ್ರದೇಶದಲ್ಲಿ ಒಟ್ಟು 710684 ನಿವೇಶನರಹಿತ ಕುಟುಂಬಗಳು ಕಂಡುಬಂದಿರುತ್ತಾರೆ.<br>ಜಿಲ್ಲಾವಾರು ವಿವರವನ್ನು ಅನುಬಂಧ – 1 ರಲ್ಲಿ ಒದಗಿಸಲಾಗಿದೆ. |
| ಆ) | ಸದರಿ ನಿವೇಶನ ರಹಿತರಿಗೆ ನಿವೇಶನ ಹಂಚಲು ಬೇಕಾಗಿರುವ ಭೂಮಿಯ ಲಭ್ಯತೆ ಇದೆಯೇ; | ಗ್ರಾಮೀಣ ಪ್ರದೇಶದಲ್ಲಿನ 710684 ನಿವೇಶನರಹಿತರಿಗೆ ಎದುರಾಗಿ 35534.00 ಎಕರೆ ಜಮೀನಿನ ಅವಶ್ಯಕತೆ ಇರುತ್ತದೆ. ಪ್ರಸ್ತುತ ಗ್ರಾಮೀಣ ಪ್ರದೇಶದಲ್ಲಿ ಒಟ್ಟು 2711.50 ಎಕರೆ ಜಮೀನು ಲಭ್ಯವಿರುತ್ತದೆ. ಸದರಿ ಜಮೀನಿನಲ್ಲಿ 54230 ನಿವೇಶನಗಳನ್ನು ರಚಿಸಬಹುದಾಗಿದ್ದು, ಉಳಿದ ನಿವೇಶನರಹಿತರಿಗೆ ನಿವೇಶನ ಹಂಚಿಕೆ ಮಾಡಲು ಇನ್ನೂ 32822.50 ಜಮೀನಿನ ಅವಶ್ಯಕತೆ ಇರುತ್ತದೆ. |
| ಇ) | ಅವಶ್ಯವಿರುವಷ್ಟು ಭೂಮಿಯ ಲಭ್ಯತೆ ಇಲ್ಲದಿದ್ದಲ್ಲಿ, ಈ ಸಂಬಂಧ ಸರ್ಕಾರ ಇದುವರೆಗೆ ಏನು ಕ್ರಮ ವಹಿಸಿದೆ; | ಅರ್ಹ ವಸತಿರಹಿತ ಕುಟುಂಬಗಳು ವಸತಿ ಸೌಕರ್ಯ ಪಡೆಯಲು ಸ್ವಂತ ನಿವೇಶನ ಹೊಂದಿರುವುದು ಕಡ್ಡಾಯವಾಗಿರುತ್ತದೆ. ಆದರೆ ಅನೇಕ ಕುಟುಂಬಗಳು ನಿವೇಶನ ಹೊಂದಿರದ ಕಾರಣ ವಸತಿ ಸೌಲಭ್ಯದಿಂದ ವಂಚಿತರಾಗುತ್ತಿದ್ದು, ಇಂತಹ ಕುಟುಂಬಗಳಿಗೆ ನಿವೇಶನ ಸೌಕರ್ಯ ಒದಗಿಸಲು ರಾಜ್ಯ ಸರ್ಕಾರವು ಮುಖ್ಯಮಂತ್ರಿಗಳ ಗ್ರಾಮೀಣ ಮತ್ತು ನಗರ ನಿವೇಶನ ಯೋಜನೆಗಳನ್ನು ಜಾರಿಗೊಳಿಸಿರುತ್ತದೆ. ನಿವೇಶನ ಹಂಚಿಕೆ ಮಾಡಲು ಸರ್ಕಾರಿ ಜಮೀನಿಗೆ ಪ್ರಥಮ ಆದ್ಯತೆ ನೀಡಲಾಗಿದೆ.<br>ಒಂದು ವೇಳೆ ಸರ್ಕಾರಿ ಜಮೀನು ಲಭ್ಯವಿಲ್ಲದ ಕಡೆಗಳಲ್ಲಿ ಮಾತ್ರ ವಸತಿಗೆ ಸೂಕ್ತ ಖಾಸಗಿ ಜಮೀನನ್ನು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಜಿಲ್ಲಾ ಜಮೀನು ಖರೀದಿ ಸಮಿತಿ ಮೂಲಕ ಖರೀದಿಸಲು ಕ್ರಮವಹಿಸಲಾಗುತ್ತಿದ್ದು, ಸರ್ಕಾರದ ಆದೇಶ ಸಂಖ್ಯೆ: ವಇ 33 ಹೆಚ್ಎಹೆಚ್ 2016 (ಭಾ-2), ದಿನಾಂಕ: 12.07.2016 ರಲ್ಲಿ ಜಮೀನು ಖರೀದಿ ದರಗಳನ್ನು ಈ ಕೆಳಗಿನಂತೆ ನಿಗದಿಪಡಿಸಲಾಗಿದೆ. |
| ಈ) | ಯಾವ ಕಾಲಮಿತಿಯೊಳಗೆ ಸದರಿ ನಿವೇಶನ ರಹಿತರಿಗೆ ನಿವೇಶನ ನೀಡಿ ನಂತರದಲ್ಲಿ ವಸತಿ ಸೌಲಭ್ಯವನ್ನು ಕಲ್ಪಿಸಲಾಗುವುದು ಹಾಗೂ ಆ ಸಂಬಂಧ ಸರ್ಕಾರ ಹಾಕಿಕೊಂಡಿರುವ ತಕ್ಷಣದ ಕಾರ್ಯಕ್ರಮ ಮತ್ತು ಯೋಜನೆಗಳೇನು ? | |

| ಕ್ರ. ಸಂ. | ಪ್ರದೇಶ | ನಿಗದಿಪಡಿಸಿರುವ ಗರಿಷ್ಠ ದರ (ಪ್ರತಿ ಎಕರೆಗೆ ರೂ.ಲಕ್ಷಗಳಲ್ಲಿ) |
|---|---|---|
| 1 | ಗ್ರಾಮೀಣ ಪ್ರದೇಶ | 9.00 |
| 2 | ಪಟ್ಟಣ ಪಂಚಾಯಿತಿ | 12.00 |
| 3 | ಪುರಸಭೆ | 15.00 |
| 4 | ನಗರಸಭೆ | 22.50 |
| 5 | ಮಹಾನಗರ ಪಾಲಿಕೆ | 37.50 |
| 6 | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ | 75.00 |

ಜಿಲ್ಲಾಧಿಕಾರಿಗಳಿಂದ ಮಂಜೂರಾದ ಸರ್ಕಾರಿ/ಖರೀದಿಸಲಾದ ಖಾಸಗಿ ಜಮೀನನ್ನು ಬಳಸಿಕೊಂಡು ಅರ್ಹ ಕುಟುಂಬಗಳಿಗೆ ಹಂತ ಹಂತವಾಗಿ ನಿವೇಶನ ಹಂಚಿಕೆಗೆ ಕ್ರಮವಹಿಸಲಾಗುತ್ತಿದೆ. ಸರ್ಕಾರದಿಂದ ನಿವೇಶನ ಪಡೆದ ಫಲಾನುಭವಿಗಳನ್ನು ಆದ್ಯತೆ ಮೇಲೆ ಪರಿಗಣಿಸಿ, ಈ ಕೆಳಕಂಡ ವಿವಿಧ ವಸತಿ ಯೋಜನೆಗಳಡಿ ವಸತಿ ಸೌಕರ್ಯ ಕಲ್ಪಿಸಲಾಗುತ್ತಿದೆ.

1. ಬಸವ ವಸತಿ ಯೋಜನೆ
2. ಪ್ರಧಾನ ಮಂತ್ರಿ ಆವಾಸ್ ಯೋಜನೆ (ಗ್ರಾಮೀಣ)
3. ಡಾ. ಬಿ.ಆರ್ ಅಂಬೇಡ್ಕರ್ ನಿವಾಸ್ ವಸತಿ ಯೋಜನೆ (ಗ್ರಾಮೀಣ)
4. ದೇವರಾಜು ಅರಸು ವಸತಿ ಯೋಜನೆ (ಗ್ರಾಮೀಣ)

ಸರ್ಕಾರವು ಪ್ರತಿ ವರ್ಷ ಆಯವ್ಯದಲ್ಲಿ ನಿಗಧಿಪಡಿಸಿರುವ ಅನುದಾನಕ್ಕನುಗುಣವಾಗಿ ವಿವಿಧ ವಸತಿ ಯೋಜನೆಗಳಡಿ ನಿಗದಿಪಡಿಸುವ ಗ್ರಾಮ ಪಂಚಾಯತಿವಾರು ಗುರಿಗೆ ಎದುರಾಗಿ ಗ್ರಾಮಸಭೆಗಳಲ್ಲಿ ಅರ್ಹ ವಸತಿ ರಹಿತರನ್ನು ನಿಯಮಾನುಸಾರ ಆಯ್ಕೆ ಮಾಡಿ ವಸತಿ ಸೌಕರ್ಯ ಕಲ್ಪಿಸಲು ಕ್ರಮ ವಹಿಸಲಾಗುತ್ತಿದೆ.

ಸಂಖ್ಯೆ :ವಇ 569 ಹೆಚ್ಎಂ 2022

**(ವಿ. ಸೋಮಣ್ಣ)**
ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ
ಸಚಿವರು

ಅನುಬಂಧ - 01

## LCQ - 1051

| ಜಿಲ್ಲೆ | ಒಟ್ಟು ನಿವೇಶನರಹಿತ ಕುಟುಂಬಗಳು | | | | |
|---|---|---|---|---|---|
| | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ | ಸಾಮಾನ್ಯ | ಅಲ್ಪಸಂಖ್ಯಾತ | ಒಟ್ಟು |
| ಬಾಗಲಕೋಟೆ | 6240 | 1962 | 20421 | 3001 | 31624 |
| ಬಳ್ಳಾರಿ | 4531 | 4815 | 6790 | 1677 | 17813 |
| ಬೆಳಗಾವಿ | 2451 | 1462 | 12895 | 2569 | 19377 |
| ಬೆಂಗಳೂರು ಗ್ರಾಮಾಂತರ | 7147 | 1664 | 11547 | 2220 | 22578 |
| ಬೆಂಗಳೂರು ನಗರ | 13108 | 2068 | 22206 | 3712 | 41094 |
| ಬೀದರ | 893 | 588 | 2511 | 465 | 4457 |
| ಚಾಮರಾಜನಗರ | 13935 | 5659 | 17488 | 1159 | 38241 |
| ಚಿಕ್ಕಬಳ್ಳಾಪುರ | 8366 | 3559 | 8834 | 1892 | 22651 |
| ಚಿಕ್ಕಮಗಳೂರು | 9627 | 1838 | 18436 | 3570 | 33471 |
| ಚಿತ್ರದುರ್ಗ | 8337 | 4626 | 12450 | 1533 | 26946 |
| ದಕ್ಷಿಣ ಕನ್ನಡ | 2074 | 690 | 14202 | 13210 | 30176 |
| ದಾವಣಗೆರೆ | 8532 | 4081 | 12041 | 3121 | 27775 |
| ಧಾರವಾಡ | 1427 | 976 | 10952 | 2630 | 15985 |
| ಗದಗ | 3871 | 1668 | 19477 | 3010 | 28026 |
| ಹಾಸನ | 2828 | 269 | 4216 | 952 | 8265 |
| ಹಾವೇರಿ | 2347 | 1782 | 7215 | 3290 | 14634 |
| ಕಲಬುರಗಿ | 925 | 17 | 2967 | 639 | 4548 |
| ಕೊಡಗು | 4189 | 2417 | 6601 | 3070 | 16277 |
| ಕೋಲಾರ | 4119 | 737 | 4463 | 1207 | 10526 |
| ಕೊಪ್ಪಳ | 3118 | 2151 | 9504 | 2091 | 16864 |
| ಮಂಡ್ಯ | 10218 | 1237 | 28808 | 1973 | 42236 |
| ಮೈಸೂರು | 10259 | 8622 | 21800 | 1376 | 42057 |
| ರಾಯಚೂರು | 3452 | 3403 | 7699 | 1781 | 16335 |
| ರಾಮನಗರ | 5770 | 565 | 12175 | 1228 | 19738 |
| ಶಿವಮೊಗ್ಗ | 9330 | 2280 | 16592 | 3959 | 32161 |
| ತುಮಕೂರು | 7663 | 2636 | 15432 | 3343 | 29074 |
| ಉಡುಪಿ | 2778 | 911 | 25202 | 3481 | 32372 |
| ಉತ್ತರ ಕನ್ನಡ | 2877 | 435 | 21189 | 4932 | 29433 |
| ವಿಜಯನಗರ | 3198 | 2313 | 6268 | 991 | 12770 |
| ವಿಜಯಪುರ | 3145 | 219 | 9373 | 1930 | 14667 |
| ಯಾದಗಿರಿ | 1522 | 1469 | 4813 | [illegible] | 8513 |
| ಒಟ್ಟು | **168277** | **67119** | **394567** | **80721** | **[illegible]0684** |